ನಗರದ ಮತ್ತೊಂದು ಆಕರ್ಷಣೆ 'ಮನ್ನೆಕೆನ್ ಪಿಸ್' (Manneken Pis) ಎಂಬ ಕಲಾಕೃತಿ.

## ಮೂತ್ರ ಮಾಡುತ್ತಿರುವ ಬಾಲಕ

ಜೆರೋಮ್ ಡುಕ್ಯುಸ್ನೋಯ್ (Jerome Duquesnoy) ಎನ್ನುವ ಕಲಾವಿದ 1619ರಲ್ಲಿ ರಚಿಸಿದ 'ಮನ್ನೆಕೆನ್ ಪಿಸ್' ಕಲಾಕೃತಿ ಕಾಲಾಂತರದಲ್ಲಿ ಅಲ್ಪಸ್ವಲ್ಪ ಮಾರ್ಪಾಟಿಗೊಳಪಟ್ಟು ಈಗಿರುವ ರೂಪವನ್ನು 1965ರಲ್ಲಿ ಪಡೆಯಿತು. 24 ಇಂಚು ಎತ್ತರವಿರುವ ಕಂಚಿನ ಈ ಕಲಾಕೃತಿ ಬ್ರುಸ್ಸೆಲ್ಸ್‌ನ ಗ್ರಾಂಡ್ ಪ್ಲೇಸ್ ಸನಿಹದಲ್ಲಿದೆ.

ಡಚ್ ಭಾಷೆಯಲ್ಲಿ ಮನ್ನೆಕಿನ್ ಪಿಸ್ ಎಂದರೆ 'ಮೂತ್ರ ಮಾಡುತ್ತಿರುವ ಪುಟ್ಟ ಬಾಲಕ' ಎಂದರ್ಥ. ಪುಟ್ಟ ಬಾಲಕನೊಬ್ಬ ಕಾರಂಜಿಯ ಪಾತ್ರೆಯೊಳಕ್ಕೆ ಮೂತ್ರ ಮಾಡುತ್ತಿರುವಂತಿರುವ ಈ ಕಲಾಕೃತಿ ಬ್ರುಸ್ಸೆಲ್ಸ್ ಜನರ ಹಾಸ್ಯಪ್ರಜ್ಞೆಯನ್ನೂ, ಅವರ ಉಲ್ಲಾಸಭರಿತ ಜೀವನೋತ್ಸಾಹವನ್ನು ತೋರಿಸುತ್ತದೆ. ಅವರಿಗದು ಭಾವನಾತ್ಮಕ ಅಸ್ಮಿತೆಯ ಸಂಕೇತ. ಅದನ್ನೊಂದು ಕಲಾಕೃತಿಯಾಗಿ ನೋಡುವಾಗ ಅಸಹ್ಯವೆನಿಸುವುದಿಲ್ಲ. ಅದರೆದುರು ನಿಂತು ಫೋಟೊ ತೆಗೆದುಕೊಳ್ಳುವ ಪ್ರವಾಸಿಗರು, ಅದರ ಪ್ರತಿಕೃತಿಗಳನ್ನೂ ಮನೆಗೆ ಕೊಂಡೊಯ್ಯುತ್ತಾರೆ.

1695ರ ಫ್ರೆಂಚ್ ದಾಳಿಯ ಸಂದರ್ಭದಲ್ಲಿ 'ಮನ್ನೆಕಿನ್ ಪಿಸ್' ಪ್ರತಿಮೆಗೆ ಹಾನಿಯಾಗಿತ್ತು. ಅದಕ್ಕೆ ನೀರುಣಿಸುತ್ತಿದ್ದ ಕೊಳವೆಗಳು ಹಾಳಾಗಿದ್ದವು. ಪುನರ್ ನಿರ್ಮಾಣದ ನಂತರ ಪ್ರತಿಮೆಯ ಮೇಲ್ಭಾಗದಲ್ಲಿ 'ಭಗವಂತ ನನ್ನನ್ನು ಈ ಕಲ್ಲಿನ ಮೇಲಿರಿಸಿದ. ಈಗ ನಾನು ನನ್ನ ಶತ್ರುಗಳೆದುರು ತಲೆಯೆತ್ತಿ ನಿಂತಿದ್ದೇನೆ' ಎಂಬ ಬರಹವನ್ನು ಕೆತ್ತಲಾಯಿತು.

ಚೋರರ ಕಾಕದೃಷ್ಟಿಗೂ ಈ ಕಲಾಕೃತಿ ನಿರಂತರವಾಗಿ ಎದುರಿಸುತ್ತಾ ಬಂದಿದೆ. ಚೋರಭಯ ಹೆಚ್ಚಾದಾಗ, ಮೂಲ ಕಲಾಕೃತಿಯನ್ನು ಬ್ರುಸ್ಸೆಲ್ಸ್‌ನ ವಸ್ತು ಸಂಗ್ರಹಾಲಯದಲ್ಲಿರಿಸಿ, ಈ ಸ್ಥಳದಲ್ಲಿ ಅದರ ನಕಲೊಂದನ್ನು ಇರಿಸಲಾಯಿತು. ಮೊದಲಿಗೆ ಪೂರ್ಣ ನಗ್ನವಾಗಿದ್ದ ಬಾಲಕನ ಕಲಾಕೃತಿಗೆ ಫ್ರಾನ್ಸಿನ ಅರಸ ಹದಿನಾಲ್ಕನೇ ಲೂಯಿಸ್ ಗೌನೊಂದನ್ನು ನೀಡಿದ. ನಂತರ ಖಡ್ಗವೊಂದನ್ನು ಹಿಡಿಯಲು ಅನುಮತಿ ನೀಡಿ, ಸೈಂಟ್ ಲೂಯೀಸನ ಶಿಲುಬೆಯನ್ನು ತೊಡಿಸುವಂತೆ ಆದೇಶಿಸಿದ.

ಪ್ರತಿಮೆಯನ್ನು ವಿವಿಧ ರೀತಿಯ ಬಟ್ಟೆಬರೆಗಳಿಂದ ಅಲಂಕರಿಸಲು ಬ್ರುಸ್ಸೆಲ್ಸ್‌ನ ಎರಾಸ್ಮಸ್ ಶಾಲೆಯ ವಿದ್ಯಾರ್ಥಿಗಳು ನಿಧಿಯೊಂದನ್ನು ಸ್ಥಾಪಿಸಿದ್ದಾರೆ. 1954ರಿಂದ 'ಮನ್ನೆಕೆನ್ ಪಿಸ್ ಸ್ನೇಹಿತರು' ಎಂದು ಕರೆದುಕೊಳ್ಳುವ ಸಂಸ್ಥೆಯೊಂದು ವಾರದಲ್ಲಿ ನಾಲ್ಕಾರು ಬಾರಿ ಈ ಪ್ರತಿಮೆಯನ್ನು ಬೇರೆ ಬೇರೆ ಉಡುಗೆ ತೊಡುಗೆಗಳಿಂದ ಅಲಂಕರಿಸುತ್ತಿದೆ.


ಬಾಲಕನಿಗೆ ಬಟ್ಟೆ ತೊಡಿಸುವ ಪರಂಪರೆ ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಶುರುವಾಗಿತ್ತೆಂದು ತಿಳಿದುಬರುತ್ತದೆ. 1918ರಿಂದ 1940ರ ನಡುವೆ ಮೂವತ್ತು ಉಡುಗೆಗಳಿದ್ದವು. 1994ರ ಹೊತ್ತಿಗೆ ಉಡುಗೆಗಳ ಸಂಖ್ಯೆ 400 ತಲುಪಿತು. 2005ರಲ್ಲಿ 750 ಮತ್ತು 2016ರಲ್ಲಿ 950 ಇದ್ದ ಉಡುಗೆಗಳು ಈಗ ಸಾವಿರದ ಗಡಿ ದಾಟಿವೆ. ಹೀಗೆ ಶೇಖರವಾದ ಸಾವಿರಾರು ಬಟ್ಟೆಗಳನ್ನು ವಸ್ತುಸಂಗ್ರಹಾಲಯದಲ್ಲಿ ಇರಿಸಿದ್ದಾರೆ. ಪ್ರತಿಮೆಯ ಬಟ್ಟೆ ಬದಲಾಯಿಸುವುದು ಸ್ಥಳೀಯ ಬ್ಯಾಂಡ್ ಸಂಗೀತದೊಡನೆ ಒಂದು ಸಮಾರಂಭದಂತೆಯೇ ನಡೆಯುತ್ತದೆ.




ಮನ್ನೆಕೆನ್ ಪಿಸ್ ಬಳಿ ಪ್ರವಾಸಿಗರು. ಅದೇ ಹೆಸರಿನ ಒಂದು ಹೋಟೆಲ್ ಹೆಸರನ್ನು ಬಲ ಮೇಲ್ಬದಿಯಲ್ಲಿ ಕಾಣಬಹುದು.

## ಸ್ವಾರಸ್ಯಕರ ಐತಿಹ್ಯಗಳು

'ಮನ್ನೆಕಿನ್ ಪಿಸ್' ಪ್ರತಿಮೆಯ ಕುರಿತು ಕೆಲವು ಆಸಕ್ತಿದಾಯಕ ಐತಿಹ್ಯಗಳಿವೆ. 1142ರಲ್ಲಿ ಎರಡು ವರ್ಷ ವಯಸ್ಸಿನ ಡ್ಯೂಕ್ ಗಾಡ್‌ಫ್ರೆ ಪರವಾಗಿ ಅವನ ಸೈನ್ಯ ಶತ್ರುಗಳೊಡನೆ ಯುದ್ಧ ಮಾಡುತ್ತಿತ್ತು. ಸೈನ್ಯಕ್ಕೆ ಸ್ಫೂರ್ತಿ ತುಂಬಲು ಅರಸು ಬಾಲಕನನ್ನು ಬುಟ್ಟಿಯೊಂದರಲ್ಲಿ ಕೂರಿಸಿ ಆ ಬುಟ್ಟಿಯನ್ನು ಮರದ ಕೊಂಬೆಯೊಂದಕ್ಕೆ ತೂಗುಹಾಕಲಾಗಿತ್ತು. ಶತ್ರುಗಳು ಹತ್ತಿರವಾದಾಗ ಈ ಬಾಲಕ ಅವರ ಮೇಲೆ ಮೂತ್ರ ಮಾಡಿಬಿಟ್ಟ. ಕೊನೆಗೆ ಶತ್ರುಗಳು ಓಡಿಹೋಗಿ, ಇವರಿಗೇ ಜಯವಾಯಿತು!



ಬಟ್ಟೆ ತೊಟ್ಟ ಮನ್ನೆಕೆನ್ ಪಿಸ್ ಪ್ರತಿಮೆ

ಇನ್ನೊಂದು ಕಥೆಯ ಪ್ರಕಾರ 14ನೇ ಶತಮಾನದಲ್ಲಿ ಬ್ರುಸ್ಸೆಲ್ಸ್ ನಗರವನ್ನು ಶತ್ರುಗಳು ಆಕ್ರಮಿಸಿಕೊಂಡಿದ್ದರು. ಸಣ್ಣ ಹುಡುಗನೊಬ್ಬ ಶತ್ರುಗಳ ಚಲನವಲನಗಳ ಮೇಲೆ ಕಣ್ಣಿಟ್ಟಿದ್ದ. ಅವರು ನಗರವನ್ನು ಸ್ಫೋಟಿಸಲು ಸಂಚು ಮಾಡುತ್ತಿದ್ದಾಗ, ಇವನು ಸ್ಫೋಟಕದ ಬತ್ತಿಯ ಮೇಲೆ ಮೂತ್ರ ಮಾಡಿ ಅದನ್ನು ಆರಿಸಿ ಸಿಡಿಯದಂತೆ ಮಾಡಿಬಿಟ್ಟ. ನಗರ ಉಳಿದುಕೊಂಡಿತು.

ಪ್ರವಾಸಿಗರಿಗೆ ಹೇಳುವ ಮತ್ತೊಂದು ಕಥೆ ಹೀಗಿದೆ. ಶ್ರೀಮಂತ ವರ್ತಕನೊಬ್ಬ ಬ್ರುಸ್ಸೆಲ್ಸ್ ನಗರಕ್ಕೆ ಭೇಟಿ ಕೊಟ್ಟಿದ್ದಾಗ ಅವನ ಪ್ರೀತಿಪಾತ್ರ ಮಗ ಕಾಣೆಯಾಗಿಬಿಟ್ಟ. ವರ್ತಕ ಸಾಕಷ್ಟು ಜನರನ್ನು ನೇಮಿಸಿ ಹುಡುಕಲು ವ್ಯವಸ್ಥೆ ಮಾಡಿದ. ಕೊನೆಗೆ ಚಿಕ್ಕ ಉದ್ಯಾನವೊಂದರಲ್ಲಿ ಮೂತ್ರ ಮಾಡುತ್ತಿದ್ದ ಬಾಲಕ ಕಣ್ಣಿಗೆ ಬಿದ್ದ. ಸ್ಥಳೀಯರ ನೆರವನ್ನು ಸ್ಮರಿಸುವುದಕ್ಕಾಗಿ ಆ ವರ್ತಕ ಕಾರಂಜಿಯೊಂದನ್ನು ನಿರ್ಮಿಸಿ ಕೊಡುಗೆಯಾಗಿ ನೀಡಿದ.

ಮತ್ತೊಂದು ಕಥೆಯ ಪ್ರಕಾರ ಪುಟ್ಟ ಬಾಲಕನೊಬ್ಬ ಆಗಷ್ಟೇ ಹೊತ್ತಿಕೊಂಡಿದ್ದ ಬೆಂಕಿಯ ಮೇಲೆ ಮೂತ್ರ ಮಾಡುವುದರ ಮೂಲಕ ಅದನ್ನು ಆರಿಸಿದ. ಇದರಿಂದಾಗಿ ಅರಮನೆಯು ಹೊತ್ತಿ ಉರಿಯುವುದರಿಂದ ಪಾರಾಯಿತು.

ಬ್ರುಸೆಲ್ಸ್‌ನಲ್ಲಿ ಮಾತ್ರವಲ್ಲ — ಬೆಲ್ಜಿಯಂ ದೇಶದ ಹಲವು ನಗರಗಳಲ್ಲಿ ಮನ್ನೆಕಿನ್ ಪಿಸ್ ಪ್ರತಿಮೆಗಳಿವೆ. ಪ್ರಪಂಚದ ಹಲವಾರು ದೇಶಗಳಲ್ಲಿಯೂ ಅದರ ಪ್ರತಿಕೃತಿಗಳಿವೆ. ಮೂತ್ರ ವಿಸರ್ಜಿಸುತ್ತಿರುವ ಬಾಲಕನ ಮೋಹಕ್ಕೆ ಇಡೀ ವಿಶ್ವವೇ ಒಳಗಾಗಿರುವುದು ಕಲೆ ಪವಾಡಕ್ಕೆ ಸಾಕ್ಷಿಯಂತಿದೆ.